ಹತ್ತಿರ ಬಂದವು. ಒಬ್ಬ ವ್ಯಾಪಾರಿಯಂತೂ ಇಲ್ಲಿಯದೇ ಮಾಲುಗಳನ್ನು ಒಯ್ದು ಊರಲ್ಲೊಂದು ಗಿರಣಿಯನ್ನೇ ಶುರು ಮಾಡಿದ. ಹೊರಗಿನ ಚೋರ ಬಜಾರ್ ಕ್ರಾಸ್ ಮಾಡಿ, ಅಡ್ಡ ಅಡ್ಡ ಗಲ್ಲಿಗಳನ್ನು ದಾಟಿ, ಕತ್ತಲೆಯ ಸಂದಿಗಳ ಗಟಾರು ನಾಲೆಗಳನ್ನು ದಾಟಿ ಯಾತನೆಯ ಮನುಷ್ಯ ಸರಿಯಾಗಿ ಇಲ್ಲೇ ಬಂದು ತಲುಪುತ್ತಾನೆ. ಹೇಳುತ್ತಾನೆ– 'ಬಾಬೂ ಫಲಾನಿ ಚೀಜ್ ಚಾಹಿಯೇ'. ಬಾಬೂ ಸಾಮಾನುಗಳ ಗುಹೆಯೊಳಗೆ ಹೋಗುತ್ತಾನೆ. ಕತ್ತಲೆಯ ಗುಹೆಯೊಳಗೆ ಒಂದು ಉದ್ದ ನೆಗೆತ ಹೊಡೆಯುತ್ತಾನೆ. ಇಲ್ಲಿ ಕೆಲಕಾಲ ಕತ್ತಲೆ ಮುಸುಕಿದೆ. ಆದರೂ ಕತ್ತಲೆಯಲ್ಲಿ ಬಾಬೂನ ಕಣ್ಣುಗಳು ರೇಡಿಯಂನಂತೆ ಹೊತ್ತಿಕೊಳ್ಳುತ್ತವೆ. ಐದೇ ನಿಮಿಷದೊಳಗೆ ಅವನು ಬೇಡಿದ ವಸ್ತುವನ್ನು ಹುಡುಕಿ ತೆಗೆದುಕೊಟ್ಟದ್ದೇ ತಡ ಗಿರಾಕಿ ದುಡ್ಡು ಕೊಟ್ಟು ಕ್ಷಣದೊಳಗೆ ಗಾಯಬ್ ಆಗಿ ಬಿಡುತ್ತಾನೆ. ಏಕೆಂದರೆ, ಗಲ್ಲಿಯ ಮತ್ತೊಂದು ತುದಿಯಲ್ಲಿ ಅವನ ಡ್ರೈವರ್ ಸ್ಟೇರಿಂಗ್ ಹಿಡಿದು ಗಾಡಿ ಸ್ಟಾರ್ಟ್ ಮಾಡುವ ಸಿದ್ಧತೆಯಲ್ಲಿ ಕೂತಿರುತ್ತಾನೆ. ಕೆಲವರ ಜಹಜು ಆ ಖಾರಿಯಲ್ಲಿ ನಿಂತಿದ್ದರೆ, ಮತ್ತೆ ಕೆಲವರ ಹೆಲಿಕ್ಯಾಪ್ಟರ್ ಜಸ್ಟ್ ಲ್ಯಾಂಡ್ ಆಗಿರುತ್ತದೆ. ಬಹಳ ದೊಡ್ಡ ದೊಡ್ಡ ಜನರು ಬರುತ್ತಾರೆ ಇಲ್ಲಿ. ದೊಡ್ಡ ವ್ಯವಹಾರ ಮಾಡಿ ಮುಗಿಸುತ್ತಾರೆ. ಆದರೆ, ಲೆಕ್ಕ ಮಾತ್ರ ಚೊಕ್ಕ. ನನ್ನ ಮುತ್ತಜ್ಜನ ಮುತ್ತಜ್ಜನ ವಖಾರಿಯಿತ್ತು ಕಲ್ಕತ್ತಾದಲ್ಲಿ. 1757ರ ಕಥೆ ಹೇಳುತ್ತಿದ್ದೇನೆ. ಒಂದು ದಿನ ಅವನ ಕತ್ತಲೆಯ ವಖಾರಿಯಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಕರ್ನಲ್ ರಾಬರ್ಟ್ ಕ್ಲೈವ್ ಮತ್ತು ಬಂಗಾಲದ ಸರದಾರ ಮೀರ್ ಜಾಫರ್ ಹೀಗೆ ಎದುರಾ ಬದುರಾ ಕುಳಿತಿದ್ದರು. ಮೀರ್ ಜಾಫರನು ಸಂಪೂರ್ಣ ಸೈನ್ಯವನ್ನು ಗುಜರಿಗೆ ಹಾಕಿ ನವಾಬ್ ಸಿರಾಜುದ್ದೌಲನೊಂದಿಗೆ ವಂಚನೆ ಮಾಡಬೇಕೆಂಬ ಸೌದಾ ಮಾಡಿದ. ಕ್ಲೈವ್ ಅವನನ್ನು ಗದ್ದುಗೆಯ ಮೇಲೆ ಕೂರಿಸಲಿದ್ದ. ಅದರ ಬದಲಿಗೆ ಈಸ್ಟ್ ಇಂಡಿಯಾ ಕಂಪನಿಯು ಒಂದು ಕೋಟಿ ರೂಪಾಯಿ ಕೊಡುತ್ತದೆ ಎಂದು ಮೀರ್ ಜಾಫರ್ ಬರೆದುಕೊಟ್ಟ. ಬ್ರಿಟಿಷರ ಹಿಂದೂಸ್ಥಾನದ ಮೊದಲ ವಸಾಹತಿನ ಕರಾರನಾಮಾ ನನ್ನ ಮುತ್ತಜ್ಜನ ಮುತ್ತಜ್ಜನ ಸಾಕ್ಷಿಯಿಂದಲೇ ಮಾಡಲಾಯಿತು. ನಮ್ಮ ಮನೆತನದ ಇತಿಹಾಸ ಹೇಳಲು ಹೋದರೆ ಅದು ಬಹಳ ದೊಡ್ಡದಿದೆ. ನೂರಾರು ಸಾವಿರಾರು ವರ್ಷಗಳದ್ದು. ಆದರೆ, ನಮ್ಮ ಮುತ್ತಜ್ಜನ ಮುತ್ತಜ್ಜನಿಂದ ಲಾಲಾ ಗುಜರಿಯವನಿಂದ ದಂಧೆಗೆ ಏಳ್ಗೆ ಬಂತು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲೆಡೆ ನಾವು ಅಂಗಡಿ ತೆರೆದೆವು. ವಖಾರಿ ಶುರು ಮಾಡಿದೆವು. ನಮ್ಮ ವಂಶಾವಳಿ ದೊಡ್ಡದು. ನನ್ನ ಅಜ್ಜಂದಿರು, ಅವರ ಮಕ್ಕಳು, ನನ್ನ ಅಪ್ಪ, ಚಿಕ್ಕಪ್ಪನ–ಮಾವಂದಿರ ಮಕ್ಕಳು, ಅವರ ಮಕ್ಕಳು, ದೇಶದ ತುಂಬೆಲ್ಲ ಇವರೆಲ್ಲರ ಗುಜರಿ ಸಾಮಾನುಗಳ ವಖಾರಿಯಿದೆ. ನಮ್ಮದು ದೊಡ್ಡ ನೆಟ್‌ವರ್ಕ್ ಇದೆ. ನಮ್ಮ ಅಕ್ಕ ತಂಗಿಯರು, ಹೆಣ್ಣು ಮಕ್ಕಳು ಲಗ್ನ ಮಾಡಿಕೊಂಡು ಬೇರೆ ಮನೆಗಳಿಗೆ ಹೋದರು. ಅನಂತರ ಆ ಮನೆಯವರನ್ನು ನಮ್ಮ ದಂಧೆಯೊಳಗೆ ಸೇರಿಸಿಕೊಂಡೆವು. ಅವರಿಗೆ ಹುಡುಗರು–ಹುಡುಗಿಯರು ಹುಟ್ಟಿದರು. ಬೆಳೆಯುತ್ತ ಹೋಯಿತು. ಈಗ ಉಪದ್ವ್ಯಾಪದ ಹೊಸ ಪೀಳಿಗೆ ಬಂದಿದೆ. ಅವರಿಗೆ ಅಂಗಡಿಯ ಲೈನ್ ಒಪ್ಪಿಗೆಯಿಲ್ಲ. ಅವರು ಮಾಲ್ ನಿಲ್ಲಿಸಿ ಬಿಟ್ಟರು. ಒಮ್ಮೆಲೆ ಚಕಾಚಕ್. ಇದೇ ಶಹರದಲ್ಲಿ ನನ್ನ ಇಬ್ಬರು ಹಿರಿಯ ಮಕ್ಕಳ ಆರು ಮಾಲ್‌ಗಳಿವೆ. ರಾಜವಾಡೆ ಯಾವ ಲೆಕ್ಕಕ್ಕೂ ಅಲ್ಲ. ನೋಡಿದರೆ ಕಣ್ಣೇ ಕುಕ್ಕುತ್ತದೆ. ಸದಾಕಾಲ ಕಿಕ್ಕಿರಿದ ಜನ. ಮಕ್ಕಳೂ ಶ್ರಮಜೀವಿಗಳು. ಆದರೆ, ಹೇಳಲೇ? ನಿಜವಾದ ಯಾತನಾ ಜೀವಿಗಳು ಬರುವುದು ಇಲ್ಲೇ. ಬಾಬೂ ಭಂಗಾರವಾಲನ ಗುಜರಿ ಅಂಗಡಿಗೆ. ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಸಿಗದಿರುವ ಅದೆಷ್ಟೋ ವಸ್ತುಗಳು ಇಲ್ಲಿ ಸಿಗುತ್ತವೆ. ಈ ಮೇಲೆ ಮೇಲೆ ಗೋಚರಿಸುವ ಸಾಮಾನುಗಳನ್ನಷ್ಟೇ ನಂಬಬೇಡಿ. ಅಂಗಡಿಯ ಒಳಗೆ ಕಗ್ಗತ್ತಲ ಗಲ್ಲಿಗಳಿವೆ. ಕಿರು ಮಾಳಿಗೆಗಳಿವೆ. ಅದರೊಳಗೆ ಅನಂತ ಕೋಟಿ ಬ್ರಹ್ಮಾಂಡವೇ ಇದೆ. ನೋಡಲು ನಿಮಗೆ ಮಹಾಭಾರತದ ಸಂಜಯನಂತೆ ದಿವ್ಯದೃಷ್ಟಿ ಬೇಕಾಗುತ್ತದೆ.